# ಈಶಾನ್ಯದಲ್ಲೇ ಏಕೆ ಬಾವಿ?



ಈಗಿನ ಕಾಲದಲ್ಲಿ ಎಲ್ಲದಕ್ಕೂ ವಾಸ್ತುವನ್ನು ನಂಬುವುದು ಪರಿಪಾಠವಾಗಿದೆ. ನಂಬುವವರಲ್ಲಿ ಹೆಚ್ಚಿನವರು ಭಯ ಪಟ್ಟುಕೊಂಡೇ ನಂಬುವುದು! ವಾಸ್ತುಶಾಸ್ತ್ರವೂ ಇತರ ಶಾಸ್ತ್ರಗಳಂತೆಯೇ ಕಾಲಕಾಲಕ್ಕೆ ಏಕೆ ಬದಲಾವಣೆ ಹೊಂದಬಾರದು? ಹಾಗೆ ಬದಲಾವಣೆ ಆಗಬೇಕಾದ ಒಂದು ಅಂಶವೇನೆಂದರೆ, 'ಈಶಾನ್ಯದಲ್ಲೇ ಬಾವಿ ಇರಬೇಕು' ಎಂಬುದು.

ಸೂರ್ಯನ ದೈನಂದಿನ ಪೂರ್ವ– ಪಶ್ಚಿಮದ ಚಲನೆಯಲ್ಲಿ ದಿನದ ಬಹು ಕಾಲ ಸೂರ್ಯನ ಬೆಳಕು ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಇರುತ್ತದೆ. ದಕ್ಷಿಣ ಮತ್ತು ಪಶ್ಚಿಮದತ್ತ ಸೂರ್ಯನ ಎಂದಿನ ಪಯಣ ಜರುಗಿದಂತೆಯೇ ನೆರಳೂ ಜರುಗತೊಡಗುತ್ತದೆ. ಆದ್ದರಿಂದ ಯಾವುದರ ಮೇಲೆ ಸೂರ್ಯನ ಬೆಳಕು ಹೆಚ್ಚು ಅಗತ್ಯವಿರುವುದೋ ಅದು ಉತ್ತರ, ಪೂರ್ವ ಹಾಗೂ ಈಶಾನ್ಯಗಳಲ್ಲಿ ಇರಬೇಕು ಎಂಬುದು ಸರ್ವವಿದಿತ. ರಿಕೆಟ್ಸ್ ಬಂದ ಮಕ್ಕಳನ್ನು ಪೂರ್ವ ದಿಕ್ಕಿಗೆ ಮುಖ ಮಾಡಿ ಕೂಡಿಸಿದರೆ ರೋಗ ಗುಣವಾಗುತ್ತಿದ್ದುದನ್ನು ಇಲ್ಲಿ ಸ್ಮರಿಸಬಹುದು.

ಅಂದಿನ ಕಾಲಗಳಲ್ಲಿ ಎಲ್ಲಾ ಬಾವಿಗಳೂ ನೆಲಬಾವಿಗಳೇ. ಮಹಾಭಾರತದಲ್ಲಿ ಭೀಷ್ಮ ಕೇಳಿದಾಗ, ಅರ್ಜುನನು ಬಾಣದಿಂದ ಕೊರೆದ ಮೊದಲ ಬೋರ್‌ವೆಲ್ ಬಿಟ್ಟರೆ ಮಿಕ್ಕೆವೆಲ್ಲವೂ ಮಾಮೂಲಿ ನೆಲಬಾವಿಗಳೇ. ಆಗಿನ ಜನಜೀವನಕ್ಕೆ ಬಾವಿಯ ನೀರು ಬಹಳ ಅಗತ್ಯವಾಗಿತ್ತು. ಸ್ನಾನ, ಶೌಚ, ಅಡಿಗೆ, ದನಕರುಗಳನ್ನು ತೊಳೆಯಲು ಮತ್ತು ಇತರ ಎಲ್ಲಾ ಕಾರ್ಯಗಳಿಗೂ ಬಾವಿಯ ಅಥವಾ ಕೆರೆಯ ನೀರೇ ಆಧಾರವಾಗಿರುತ್ತಿತ್ತು. ಇಂತಹ ನೀರು ಕೊಳೆಯಾಗದೆ, ಬ್ಯಾಕ್ಟೀರಿಯಾಗಳಿಲ್ಲದೆ ಇರುವುದು ಅಂದಿನ ಜನರ ಆರೋಗ್ಯಕ್ಕೆ ಅತ್ಯಗತ್ಯವಾಗಿತ್ತು.

ಅಂದಿನ ಎಲ್ಲಾ ಬಾವಿಗಳೂ ಬಹಳ ಅಗಲವಾದವು ಮತ್ತು ತೆರೆದ ಬಾವಿಗಳೇ ಆಗಿರುತ್ತಿದ್ದುದರಿಂದ ದಕ್ಷಿಣ ಮತ್ತು ಪಶ್ಚಿಮಗಳಲ್ಲಿ ಬಾವಿ ಅಗೆದರೆ ಅವುಗಳ ಮೇಲೆ ಸೂರ್ಯನ ಕಿರಣಗಳು ಬೀಳುವ ಸಮಯ ಹೆಚ್ಚಾಗಿರುತ್ತಿರಲಿಲ್ಲ. ಹಾಗಾಗಿ ನೀರಿನಲ್ಲಿ ಪಾಚಿ ಮತ್ತು ಬ್ಯಾಕ್ಟೀರಿಯಾಗಳು ಉತ್ಪತ್ತಿಯಾಗುವುದು ಹೆಚ್ಚುತ್ತಿತ್ತು. ಪೂರ್ವ ಮತ್ತು ಉತ್ತರದ ದಿಕ್ಕಿನ ಬಾವಿಗಳಲ್ಲಿ ಹೆಚ್ಚುಕಾಲ ಸೂರ್ಯನ ಬೆಳಕು ಬೀಳುತ್ತಿದ್ದುದರಿಂದ ಬ್ಯಾಕ್ಟೀರಿಯಾಗಳು ಮತ್ತು ಪಾಚಿ ಕಡಿಮೆಯಾಗಿ ಆ ಬಾವಿಗಳ ನೀರು ಹೆಚ್ಚು ಆರೋಗ್ಯಕರವಾಗಿರುತ್ತಿತ್ತು.

ಇದನ್ನು ಹಲವಾರು ವರ್ಷಗಳು ಗಮನಿಸಿದ ಹಿರಿಯರು ಪಶ್ಚಿಮ– ದಕ್ಷಿಣಗಳಿಗಿಂತಲೂ, ಪೂರ್ವ– ಉತ್ತರದ, ಅಥವಾ ಈಶಾನ್ಯದ ಬಾವಿಗಳು ಜನಜೀವನಕ್ಕೆ ಹೆಚ್ಚು ಅನುಕೂಲಕರ ಎಂದು ಮನಗಂಡು, ಅದನ್ನು ಆಚರಣೆಗೆ ತಂದರು. ಹಿಂದಿನ ಕಾಲದ ದೇವಸ್ಥಾನಗಳೆಲ್ಲಾ ತಮ್ಮ ಕಲ್ಯಾಣಿಗಳನ್ನು ಈಶಾನ್ಯದತ್ತಲೇ ಕಟ್ಟುತ್ತಿದ್ದುದೂ ಇದೇ ಕಾರಣದಿಂದಲೇ. ಅಂದಿಗೆ ಈಶಾನ್ಯದಲ್ಲೇ ಬಾವಿ ಇರಬೇಕಾದುದು ಸೂಕ್ತವಾದುದೇ ಆಗಿತ್ತು.

### ಆದರೆ ಇಂದು?

ಜನಸಂಖ್ಯೆ ಹೆಚ್ಚಿ, ಇರುವ ನದಿಗಳ ನೀರು ನಾಗರಿಕರ ಬೇಡಿಕೆ ಪೂರೈಸಲು ಅಸಮರ್ಥವಾಗಿರುವ ಕಾರಣದಿಂದ ಸಿಕ್ಕಸಿಕ್ಕಲ್ಲಿ ಬೋರ್ ಕೊರೆಯುವುದು ಪರಿಪಾಠವಾಗಿರುವ ಈ ಕಾಲದಲ್ಲಿಯೂ ಈಶಾನ್ಯವನ್ನೇ ಹುಡುಕಿಕೊಂಡು ಬೋರ್‌ವೆಲ್ ತೋಡುವುದು ಹಾಸ್ಯಾಸ್ಪದ. ಈಗಿನ ದಿನಗಳ ಬೋರ್‌ವೆಲ್‌ಗಳಂತೂ ಎಂಟು ನೂರರಿಂದ ಸಾವಿರ ಅಡಿಗಳ ಆಳದವರೆಗೂ ಕೊರೆಯಲ್ಪಡುತ್ತಿವೆ. ಆ ಬೋರ್‌ವೆಲ್‌ಗಳ ನೀರಿನ ಮೇಲೆ ಸೂರ್ಯನ ಕಿರಣಗಳು ಬೀಳಬೇಕಾದರೆ ಅವುಗಳಿಗಾಗಿಯೇ ಒಂದು ವಿಶೇಷ ವ್ಯವಸ್ಥೆ ಮಾಡಬೇಕಾದೀತು. ಹಾಗೆ ಮಾಡಿದರೂ ಪಂಪು, ಪೈಪುಗಳ ಗೋಜಲುಗಳ ಮಧ್ಯದಲ್ಲಿ ಹಾದು ಅಷ್ಟು ಆಳದವರೆಗೆ ಸೂರ್ಯನ ಕಿರಣಗಳನ್ನು ಮುಟ್ಟಿಸಲು ಹರಿಹರ ಬ್ರಹ್ಮರಿಗೂ ಸಾಧ್ಯವಾಗದು.

ಈ ಬೋರ್‌ಗಳಲ್ಲಿ ಪಾಚಿ ಕಟ್ಟುವುದು ಅಸಾಧ್ಯ ಮತ್ತು ನೀರಿನಲ್ಲಿ ಇರದ ಬ್ಯಾಕ್ಟೀರಿಯಾಗಳು ನಂತರ ಹುಟ್ಟುವುದೂ ಅಸಂಭವ. ಕೇಸಿಂಗ್ ಪೈಪ್ ಹಾಕಿದ ಜಾಗದಲ್ಲಿ ಸಂದುಗಳು ಉಂಟಾಗಿ, ಸುತ್ತಲಿನ ಕೊಳವೆ ನೀರೇನಾದರೂ ಜಿನುಗಿ ಒಳ ಸೇರಿದರೆ ಮಾತ್ರ ಅಂತಹ ತೊಂದರೆ ಉಂಟಾದೀತು. ಹಾಗೆ ಆದಾಗಲೂ ಸಹ ಸೂರ್ಯನ ಕಿರಣಗಳು ಅದರ ಮೇಲೆ ಹಾಯ್ದು ಆ ಬ್ಯಾಕ್ಟೀರಿಯಾಗಳನ್ನು ತಲುಪಿ, ನಾಶ ಮಾಡುವುದು ಆಗದ ಮಾತು.

ವಾಸ್ತವ ಹೀಗಿರುವಾಗ ವಾಸ್ತುವಿನ ಕಾರಣಕ್ಕೆಂದು ಈಶಾನ್ಯವನ್ನೇ ಹುಡುಕುವುದು ಇಂದಿನ ದಿನಗಳಲ್ಲಂತೂ ಅನವಶ್ಯ! ಹ್ಞಾಂ! ಇಂದಿಗೂ ಮಾಮೂಲಿ ನೆಲ ಬಾವಿ ಅಗೆಸುವಿರಾದರೆ ಈಶಾನ್ಯದಲ್ಲೇ ಅಗೆಯಿಸಿರಿ, ಅದೂ ಅಕ್ಕಪಕ್ಕದ ಕಟ್ಟಡಗಳ ನೆರಳು ಬೀಳದಿದ್ದಲ್ಲಿ ಮಾತ್ರ!

■ ವೈ–ಚಾರಿ